ಪಿ.ಡಬ್ಲ್ಯೂ:1

ದಿನಾಂಕ :15-09-2022 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲುಃ 9 ನೇ ಪ್ರತಿವಾದಿ ಪರ ಎನ್.ಎಂ.ಸಿ.ವಕೀಲರಿಂದಃ

ಸರ್ವೆ ನಂ. 40/3 ಎಷ್ಟು ಎಕರೆ ಇದೆಗೊತ್ತಿಲ್ಲ. ಅದು ಯಾವ ಊರಿಗೆ ಸೇರಿದೆ ಗೊತ್ತಿಲ್ಲ. ಅದು ಸಿ. ನಂದಿಹಳ್ಳಿ ಗ್ರಾಮಕ್ಕೆ ಸೇರಿದೆ ಎಂದರೆ ಇರಬಹುದು, ಗೊತ್ತಿಲ್ಲ. ಈ ಸರ್ವೆ ನಂ. ಗೆ ಮೂಲ ಮಾಲೀಕರು ಯಾರು ನನಗೆ ಗೊತ್ತಿಲ್ಲ. ಅದರ ಮೂಲ ಮಾಲೀಕರು ಕೃಷ್ಣೋಜಿ ರಾವ್ ಗಯಾಕ್ ವಾಡ್ ಎಂದರೆ ಸರಿ. ಅವರ ಮಕ್ಕಳ ಹೆಸರು ಗೊತ್ತಿಲ್ಲ. ಸಂಜನ್ ರಾವ್ ಗಾಯಕ್ ವಾಡ್ ಎಂದರೆ ಗೊತ್ತಿಲ್ಲ. ಅವರ ತಮ್ಮ ಲಕ್ಷ್ಮಣ್ ರಾವ್ ಗಾಯಕ್ ವಾಡ್ ಎಂದರೆ ಗೊತ್ತಿಲ್ಲ. ಅವರು ಈ ಆಸ್ತಿಯನ್ನು ನನ್ನ ತಾಯಿಗೆ ದಿಃ03.09.1961 ರಲ್ಲಿ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ನನ್ನ ತಾಯಿ ಹೆಸರು ಲಕ್ಷ್ಮೀಬಾಯಿ ಗಂಡ ಶಾಮ್ ರಾವ್. ಆ ಕ್ರಯಪತ್ರದ ಆಧಾರ ದಲ್ಲಿ ಈ ಆಸ್ತಿಯನ್ನು ನನ್ನ ತಾಯಿ ಹೆಸರಿಗೆ mutation ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ನನ್ನ ತಾಯಿ ದಿಃ01.08.1984 ರಂದು ಈ ಆಸ್ತಿಯನ್ನು ಸುನಂದಮ್ಮ ಅವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಕ್ರಯ ಪತ್ರದ ಆಧಾರ ಮೇಲೆ ಸುನಂದಮ್ಮ ಇವರಿಗೆ ಆಸ್ತಿ ವರ್ಗಾವಣೆ ಆಗಿದೆ ಎಂದರೆ ಗೊತ್ತಿಲ್ಲ. ಈ ಷೆಡ್ಯೂಲ್ ಆಸ್ತಿ ಮೇಲೆ ಸುನಂದಮ್ಮ SBI ಚೇಳೂರು branch ನಲ್ಲಿ ಸಾಲ ತೆಗೆದಿದ್ದಾರೆ ಎಂದರೆ ಗೊತ್ತಿಲ್ಲ. ಈ ಆಸ್ತಿಯಲ್ಲಿ ಸುನಂದಮ್ಮ ತೆಂಗು, ಅಡಿಕೆ ಬೆಳೆದು ಬೋರ್ ವೆಲ್ ಹಾಕಿಸಿದ್ದಾರೆ ಎಂದರೆ ಗೊತ್ತಿಲ್ಲ. ಅಲ್ಲಿಂದ ಇಲ್ಲಿಯವರೆಗೆ ಅವರು ಈ ಆಸ್ತಿಯ ಶಾಂತಿಯುಕ ಸ್ವಾಧೀನದಲ್ಲಿದ್ದಾರೆ ಎಂದರೆ ಗೊತ್ತಿಲ್ಲ. ಈ ಆಸ್ತಿಯಲ್ಲಿ ಸ್ವಲ್ಪ ಜಾಗ ಸರ್ಕಾರ ದವರು ವಶ ಪಡಿಸಿಕೊಂಡಿದ್ದು ಅದರ ಪರಿಹಾರವನ್ನು 9 ಪ್ರತಿವಾದಿ ಸುನಂದಮ್ಮ ಪಡೆದುಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ನನ್ನ ಅಫಿಡವಿಟ್ ನಲ್ಲಿ ದಾವಾ ಆಸ್ತಿ ಒಟ್ಟು ಕುಟುಂಬದ ಆಸ್ತಿ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಅದು ನನ್ನ ತಾಯಿ ಕೊಂಡುಕೊಂಡಂತ ಆಸ್ತಿ ಅದರಲ್ಲಿ ನನ್ನ ಹಕ್ಕಿಲ್ಲ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-
(ಉಂಡಿ ಮಂಜುಳ ಶಿವಪ್ಪ )
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫಸಿ, ಗುಬ್ಬಿ.